ಬರಂತಾ ಇದ್ದು ಇದಕ್ಕೆ ಯೋಗ್ಯವಾದ ನಿಟ್ಟಿನಲ್ಲಿ ಕೆ.ಇ.ಬಿ., ಡಿವಿಜನಲ್ ಪುತ್ತೂರಿನಲ್ಲಿ ಶೀಘ್ರವಾಗಿ ಕೆಲಸ ಆಗುವ ರೀತಿಯಲ್ಲಿ, ಅದೇ ರೀತಿಯಲ್ಲಿ ಪುತ್ತೂರಿಗೆ ಬರಬೇಕಾದ ೧೧೦ ಕೆ.ವಿ. ಲೈನ್ ಕೆಲಸ ಕಾರ್ಯದಲ್ಲಿ ಮುಂದಗತಿಯ ಕೆಲಸ ಕಾರ್ಯ ನಡೆಯುತ್ತಾ ಇದ್ದು ಇದನ್ನು ಕೂಡ ಕೂಡಲೇ ಕೈಗೂಡಿಸಿ ಕೊಡಬೇಕಾಗಿ ಸಂಬಂಧಪಟ್ಟಂತೆ ವಿದ್ಯುತ್ ಮಂತ್ರಿಗಳನ್ನು ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ ಮಂತ್ರಿಗಳು).—ಇನ್ನೂ ವಿವರ ಬಂದಿಲ್ಲ. ಉತ್ತರ ತರಿಸಿ ಕೊಡುತ್ತೇನೆ.

೨-೦೧ ಪಿ. ಎಂ.

iv) ಹಾಲಿ ಇ.ಎಸ್.ಐ. ಮೆಡಿಕಲ್ ಆಫೀಸರ್ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಯವರು ಪ್ರಕಟಿಸಿದರೂ ವೆಯಿಟಿಂಗ್ ಲೀಸ್ಟ್ ಅಥವಾ ರಿಜರ್ವ್ಡ್ ಲಿಸ್ಟ್ ಪ್ರಕಟಿಸದಿರುವ ಬಗ್ಗೆ.

ಶ್ರೀ ಐ ಬಿ. ಶಂಕರ್ (ಚಿಕ್ಕಮಗಳೂರು).—ಅಧ್ಯಕ್ಷರೇ, ಇ.ಎಸ್.ಐ. ಮೆಡಿಕಲ್ ಆಫೀಸರ್ಸ್ ಹುದ್ದೆಗೆ ಸಂದರ್ಶನವನ್ನು ಲೋಕಸೇವಾ ಆಯೋಗದವರು ನಡೆಸಿ ಈಗ ಆಯ್ಕೆ ಪಟ್ಟಿಯನ್ನು ಫೆಬ್ರುವರಿ ೨೮ರಂದು ಪ್ರಕಟಿಸಿರುತ್ತಾರೆ. ವಿಕಕಾಲದಲ್ಲಿ ಅಸಿಸ್ಟೆಂಟ್ ಸರ್ಜನ್ ಹುದ್ದೆಗೆ ಸಂದರ್ಶನ ನಡೆಸುತ್ತಿರುತ್ತಾರೆ. ಈಗಾಗಲೇ ಇ.ಎಸ್.ಐ. ಆಯ್ಕೆ ಆಗಿರುವ ಅಭ್ಯರ್ಥಿಗಳು ಅಸಿಸ್ಟೆಂಟ್ ಸರ್ಜನ್ ಹುದ್ದೆಯ ಸಂದರ್ಶನಕ್ಕೆ ಬರುವುದರಿಂದ ಅದರಲ್ಲಿಯೂ ಸುಮಾರು ೬೦ ರಿಂದ ೭೦ ರಷ್ಟು ಪುನ: ಅವರೆ ಮರು ಆಯ್ಕೆಯಾಗುವ ಸಂಭವ ಹೆಚ್ಚು ಇದೆ. ಜೊತೆಗೆ ಈ ರೀತಿ ಎರಡರಲ್ಲೂ ಆಯ್ಕೆ ಆದವರು ಸುಮಾರು ೬೦ ರಿಂದ ೭೦ ರಷ್ಟು ಅಭ್ಯರ್ಥಿಗಳು ಅಸಿಸ್ಟೆಂಟ್ ಸರ್ಜನ್ ಹುದ್ದೆಯನ್ನೇ ಆದ್ಯತೆ ಕೊಟ್ಟು ಆಯ್ಕೆ ಮಾಡಿಕೊಳ್ಳುವುದರಿಂದ ಇ. ಎಸ್. ಐ.ನಲ್ಲಿ ೬೦ ರಿಂದ ೭೦ ರಷ್ಟು ಹುದ್ದೆಗಳು ಖಾಲಿ ಬೀಳುತ್ತದೆ. ಈ ಖಾಲಿ ಬಿದ್ದ ಇ. ಎಸ್. ಐ. ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗದವರು ಪುನ: ಸಂದರ್ಶನದ ಮೂಲಕ ತುಂಬಲು ತುಂಬಾ ತಡವಾಗುತ್ತದೆ. ಅಲ್ಲದೆ ಆದಕ್ಕಾಗಿ ಪುನ: ಸರ್ಕಾರದ ಅನುಮತಿ, ಲೋಕಸೇವಾ ಆಯೋಗದ ಸಂದರ್ಶನ ಈ ಎಲ್ಲ ಕ್ರಮವನ್ನು ಅನುಸರಿಸಲು ತುಂಬಾ ಸಮಯ ಬೇಕಾಗುತ್ತದೆ. ಆದ್ದರಿಂದ ಈಗಾಗಲೇ ನಡೆಸಿರುವ ಸಂದರ್ಶನದಲ್ಲಿಯೇ ಸುಮಾರು ೬೦ ೭೦ ವೈದ್ಯರ ರಿಜರ್ವ್ಡ್ ಪಟ್ಟಿ ಅಥವಾ ವೆಯಿಟಿಂಗ್ ಪಟ್ಟಿಯನ್ನು ಪ್ರಕಟಿಸಿ ಖಾಲಿ ಬೀಳಬಹುದಾದ ಹುದ್ದೆಗಳಿಗೆ ತುಂಬುವುದು ಒಳ್ಳೆಯದಲ್ಲವೆ ? ಆದ್ದರಿಂದ ಸರ್ಕಾರದವರು ತತ್‌ಕ್ಷಣ ಲೋಕಸೇವಾ ಆಯೋಗವನ್ನು ವೆಯಿಟಿಂಗ್ ಲೀಸ್ಟ್ ಅಥವಾ ರಿಜರ್ವ್ ಲೀಸ್ಟ್‌ನ್ನು ಪ್ರಕಟಿಸಲು ಸೂಚನೆ ಕೊಡ ಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಅಲ್ಲದೆ ಈವರೆಗೂ ಯಾವುದೇ ವೈದ್ಯರ ಹುದ್ದೆಗಳ ಆಯ್ಕೆ ಮಾಡುವಾಗ ವೆಯಿಟಿಂಗ್ ಪಟ್ಟಿ ಅಥವಾ ರಿಜರ್ವ್ಡ್ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಆದರೆ ಇ.ಎಸ್.ಐ. ವೈದ್ಯರ ಹುದ್ದೆಗೆ ಮಾತ್ರ ಈ ರೀತಿ ಪ್ರಕಟಿಸಿಲ್ಲ. ಇದಕ್ಕೆ ಕಾರಣವೂ ತಿಳಿದಿಲ್ಲ. ಆದ್ದರಿಂದ ಈ ಕೂಡಲೇ ವೆಯಿಟಿಂಗ್ ಅಥವಾ ರಿಜರ್ವ್ಡ್ ಪಟ್ಟಿ ಪ್ರಕಟಿಸುವಂತೆ ಸರ್ಕಾರದವರು ಕ್ರಮ ತೆಗೆದು ಕೊಳ್ಳುವುದು.

ಈಗಾಗಲೇ ಇ.ಎಸ್.ಐ. ವೈದ್ಯ ನಿರ್ದೇಶಕರು ಈ ೧೦೦ ಹುದ್ದೆಗಳನ್ನು ಪ್ರಕಟಿಸಿರುವುದಲ್ಲದೆ ಇನ್ನು ೫೦ ಹುದ್ದೆಗಳು ಬೇಕೆಂಬ ಬೇಡಿಕೆಯನ್ನು ಸರ್ಕಾರದವರಿಗೆ ಬರೆದಿದ್ದಾಗ್ಯೂ ಸರ್ಕಾರದವರು ಬರಗಾಲವೆಂದು ಈ ಹೆಚ್ಚು ಹುದ್ದೆಗಳ ಬೇಡಿಕೆಯನ್ನು ಒಪ್ಪುವುದಿಲ್ಲ ಎಂದು ತಿಳಿದು ಬಂದಿದೆ. ಹೇಳುವುದಾದರೆ, ಇ.ಎಸ್.ಐ. ವೈದ್ಯರ ಹುದ್ದೆಗಳು ಬೇಕಾಗಿರುವುದು ಕಾರ್ಮಿಕರಿಗೆ ಇದಕ್ಕೂ ಬರಗಾಲಕ್ಕೂ ಯಾವುದೇ ಸಂಬಂಧ ಬರುವುದಿಲ್ಲ. ಇದಲ್ಲದೆ ಆಸಿಸ್ಟೆಂಟ್ ಸರ್ಜನ್ ೧೦೦ ಹುದ್ದೆಗಳಿಗೆ ಕರೆದು ಬರಗಾಲ ಇದ್ದಾಗ್ಯೂ ಇನ್ನು ೫೦ ಹುದ್ದೆಗಳಿಗೆ ಹೆಚ್ಚುವರಿ ಮಾಡಿದ್ದಾರೆ. ಈ ತಾರತಮ್ಯವನ್ನು ಸರ್ಕಾರದವರು ಏಕೆ ಮಾಡುತ್ತಿದ್ದಾರೆ ?

ಶ್ರೀ ಜೆ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಸದಸ್ಯರು ಹೇಳಿರುವ ವಿಷಯವನ್ನು ಮಾನ್ಯ ಕಾರ್ಮಿಕ ಸಚಿವರ ಗಮನಕ್ಕೆ ತರುತ್ತೇನೆ. ಹಾಗೂ ಉತ್ತರ ಕೊಡುವಂತೆ ತಿಳಿಸುತ್ತೇನೆ.

ಅಧ್ಯಕ್ಷರು.—ಶ್ರೀ ಆರ್. ರಾಮಯ್ಯನವರು ಗೈರು ಹಾಜರಿ. ೩೧೦ರ ನಿಯಮದ ಮೇರೆಗಿನ ವಿಷಯಗಳನ್ನು ಒಬ್ಬರ ಪರವಾಗಿ ಇನ್ನೊಬ್ಬರು ಪ್ರಸ್ತಾಪ ಮಾಡಲು ಅಥಾರಿಟಿ ಕೊಡಲಿಕ್ಕೆ ಬರುವುದಿಲ್ಲ.

v) ಸಂಳ್ಯ ತಾಲ್ಲೂಕಿನ ಅರಂತೋಡು ನೆಹರೂ ಸ್ಮಾರಕ ಪ್ರಾಥ ಶಾಲೆಗೆ ಅನುದಾನವನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಕೆ. ಕಂಶಾಲ(ಸುಳ್ಯ).—ಸುಳ್ಯ ತಾಲ್ಲೂಕಿನ ಅರಂತೋಡು ನೆಹರೂ ಸ್ಮಾರಕ ಪ್ರೌಢ ಶಾಲೆ (ಹೈಸ್ಕೂಲ್) ಅನುದಾನ ಮಂಜೂರಾತಿ ಇಲಾಖೆವತಿಯಿಂದ ಬಿಡುಗಡೆಗೆ ಶಿಫಾರಸ್ಸು ಆಗಿ ತಿಂಗಳು (೩) ಮೂರು ಕಳೆಯಿತು. ಈ ಹೈಸ್ಕೂಲಿಗೆ ಈತನಕ ಸರಕಾರದಿಂದ ಅನುದಾನ ಮೊತ್ತ ಬಿಡುಗಡೆ ಆಗಿರುವುದಿಲ್ಲ. ಇದರಿಂದಾಗಿ ಸದರಿ ಹೈಸ್ಕೂಲ್ ಅಧ್ಯಾಪಕರು ಸಿಬ್ಬಂದಿ ವರ್ಗದವರು ಕಳೆದ ಒಂದು ವರ್ಷದಿಂದ ವೇತನ ಸಿಗದೆ ಜೀವನೋಪಾಯಕ್ಕೆ ತೊಂದರೆ ಆಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಸಚಿವರು ಕೂಡಲೇ ಹಣ ಬಿಡುಗಡೆಗೆ ವ್ಯವಸ್ಥೆಯನ್ನು ಮಾಡಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ(ಮಾನ್ಯ ಸಹಕಾರ ಸಚಿವರು).—ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಯವರ ಗಮನಕ್ಕೆ ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ತಂದು, ಸೂಕ್ತ ಉತ್ತರವನ್ನು ಸದಸ್ಯರಿಗೆ ಕಳುಹಿಸಿಕೊಡುವಂತೆ ಹೇಳುತ್ತೇನೆ.

vi) ದಕ್ಷಿಣ ಕನ್ನಡ ಜಿಲ್ಲಾ ಬಂಟ್ವಾಳ ತಾಲ್ಲೂಕಿನಲ್ಲಿ ಕಂಡಿಯಂಬ ನೀರಿನ ಯೋಜನೆ ಬಗ್ಗೆ.

ಶ್ರೀ ಬಿ. ಎ. ಉಮರಬ್ಬ(ವಿಟ್ಲ).—ದಕ್ಷಿಣ ಕನ್ನಡ ಜಿಲ್ಲಾ ಬಂಟ್ವಾಳ ತಾಲ್ಲೂಕು ಕುಡಿಯಂಬ ನೀರಿನ ಯೋಜನೆಯು ಕಾರ್ಯ ಸಂಪೂರ್ಣವಾಗಿ ಮುಗಿದು, ಪೂರ್ಣ ಹಣ ಸಂದಾಯವು ಆಗಿದ್ದು, ಕೆಲವಾರು ತಿಂಗಳುಗಳು ಕಳೆದು ಹೋದುವು, ಈ ಯೋಜನೆಯಿಂದ ನಲ್ಲಿ ನೀರು ಪಡೆಯಬೇಕಾಗಿದ್ದ ಗ್ರಾಮಗಳಾದ ಸಜಿಪ ಮುನ್ನೂರು, ಬೊಳ್ಳಾಯಿ, ನಂದಾವರ, ಇತ್ಯಾದಿ ಊರುಗಳ ಜನರು ಇನ್ನೇನು ತಮಗೆ ಕುಡಿಯಂಬ ನೀರು ದೊರೆಯುತ್ತದೆ ಎನ್ನುವ ಆಶಾಭಾವನೆಯಿಂದ ಕಾಯುತ್ತಾ ಬಂದಿದ್ದಾರೆಯೇ ಹೊರತು ಇದುವರೆವಿಗೂ ನೀರಿನ ಸರಬರಾಜು ಕಾರ್ಯ ಪ್ರಾರಂಭವೇ ಆಗದೇ ಇರುವುದು ಗ್ರಾಮಸ್ಥರಲ್ಲಿ ಆಶ್ಚರ್ಯವನ್ನು ಮೂಡಿಸಿದೆ. ಮೊದಲಿಗೆ ಟ್ಯಾಂಕ್ ಕೆಲಸ ಪೂರ್ಣವಾಗಿಲ್ಲ ವೆಂದೂ, ಆದಾದನಂತರ ವಿದ್ಯುತ್ ಕೆಲಸ ಪೂರ್ಣವಾಗಿಲ್ಲವೆಂದೂ, ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾ ಬಂದರು. ಆದರೆ ಈಗ ಎಲ್ಲಾ ಕೆಲಸವೂ ಪೂರ್ಣಗೊಂಡು ಬಹಳಷ್ಟು ಸಮಯ ಕಳೆಯಿತು ಆದರೂ, ನೀರು ಇನ್ನೂ ನಲ್ಲಿಯಲ್ಲಿ ಬರುವ ಯಾವ ಸೂಚನೆಯೂ ಕಂಡು ಬರುತ್ತಿಲ್ಲ.

ಸರಕಾರದಿಂದ ಸಂದಾಯವಾಗಬೇಕಾದ ಮೊತ್ತವೆಲ್ಲಾ ಸಂದಾಯವಾಗಿ, ಕಾಮಗಾರಿಯೆಲ್ಲಾ ಪೂರ್ಣಗೊಂಡಿದ್ದರೂ, ಇನ್ನು ನೀರು ಸರಬರಾಜು ಮಾತ್ರ ವಿಳಂಬವಾಗುತ್ತಲೇ ಇರುವುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಗಮನವನ್ನು ಈ ಮೂಲಕ ಸೆಳೆದು ಈ ನೀರಿನ ಯೋಜನೆಯಿಂದ ಗ್ರಾಮಸ್ಥರು ನಿರೀಕ್ಷಿಸುತ್ತಿರುವ ನೀರು ಎಷ್ಟು ಅವಧಿಯೊಳಗೆ ಸಿಕ್ಕೀತು ? ಹಾಗೂ ಈ ವಿನಾಕಾರಣ ವಿಳಂಬಕ್ಕೆ ಕಾರಣವೇನು ಎಂಬುದರ ಬಗ್ಗೆ ಸ್ಪಷ್ಟೀಕರಣ ಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು).—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ, ಬಂಟವಾಳ ತಾಲ್ಲೂಕು ಸಜಿಪ ಮುನ್ನೂರ ಗ್ರಾಮಕ್ಕೆ ಕುಡಿಯಂಬ ನೀರಿನ ಯೋಜನೆಯನ್ನು ೧೯೮೫–೮೪ರಲ್ಲಿ ರೂ. ೪.೬೨ ಲಕ್ಷ ಅಂದಾಜು ವೆಚ್ಚದಲ್ಲಿ ಮಂಜೂರು ಮಾಡಲಾಗಿದೆ. ೧೯೮೧ರ ಜನಗಣತಿಯ ಪ್ರಕಾರ ಈ ಗ್ರಾಮದ ಜನಸಂಖ್ಯೆ ೫,೪೯೦ ಇರುತ್ತದೆ. ಈವರೆಗೆ ರೂ. ೬.೦೮ ಲಕ್ಷ ಖರ್ಚಾಗಿದ್ದು ಕಾಮಗಾರಿಗಳು ಪೂರ್ಣಗೊಂಡಿದೆ. ನಿಗದಿ ಮಾಡಿದ ಪ್ರಕಾರ ಈ ಯೋಜನೆಯನ್ನು ಮಾರ್ಚ್ ೧೯೮೬ರ ಒಳಗೆ ಕಾರ್ಯಗತಗೊಳಿಸಲಾಗುವುದು. ವಿದ್ಯುಚ್ಛಕ್ತಿಯ ತಾಂತ್ರಿಕ ಅಡಚಣೆ ಇದೆ ಎಂದು ತಿಳಿದು ಬಂದಿದೆ. ಆದರೂ ಇದನ್ನು ಸರಿಪಡಿಸಿದ ನಂತರ ಶೀಘ್ರದಲೇ ಕಾರ್ಯಗತಗೊಳಿಸಲಾಗುವುದು.